

*ಹಂಗಿಸುತ ಕಾಲನಂ, ಚಾಳಿಸುತ ಸೃಷ್ಟಿಯಂ,*
*ಲಯವನಣಕಿಸುತ ನಿಂತಿರುವೆ ನೀನು.*
*ನಿನ್ನ ನೋಡಿದ ಹೃದಯದೊಳು ನೀನಿರದೆಯುದಿಸಿ*
*ನಿನ್ನಾತ್ಮದಭಯಮಂ ತುಂಬುತಿರುವೆ.*
*ಹೇ ಮಹಾಪ್ರಹರಿಯೇ, ನಿನ್ನ ನಿರ್ವಾಣದಾ*
*ದಿವ್ಯ ನಿರ್ಲಕ್ಷ್ಯತೆಯನೆಮಗೆ ನೀಡೈ.*
*-ಕುವೆಂಪು ('ಕೊಳಲು' ಕವನ ಸಂಕಲನದಿಂದ)*

ಹೀಗೆ ರಾಷ್ಟ್ರಕವಿ ಕುವೆಂಪು ಹಾಡಿ ಬಣ್ಣಿಸಿದ ಗೊಮ್ಮಟನಿಗೆ ಇದೀಗ 88ನೇ ಮಹಾಮಜ್ಜನದ ಸಂಭ್ರಮ. 21ನೇ ಶತಮಾನದ ಎರಡನೇ ಮಹಾಮಸ್ತಕಾಭಿಷೇಕದ ವೈಭವ ಒಂದೆಡೆಯಾದರೆ ಆ ಸಡಗರಕ್ಕೆ ಹೈಟೆಕ್ ಸ್ಪರ್ಶ ದೊರೆತಿರುವುದು ಮತ್ತೊಂದು ವಿಶೇಷ.

ಈ ಬಾರಿಯ ಮಹಾಮಸ್ತಕಾಭಿಷೇಕ ದೊರೆತಿರುವ ವಿಶೇಷತೆಗಳು ಭಕ್ತಾದಿಗಳಲ್ಲಿ, ಪ್ರವಾಸಿಗರಲ್ಲಿ ಪುಳಕವನ್ನು ಉಂಟುಮಾಡಿದೆ. ಜೈನಕಾಶಿಯೆಂದೇ ಪ್ರಖ್ಯಾತಿ ಪಡೆದ ಶ್ರವಣಬೆಳಗೊಳದಲ್ಲಿ ಸರ್ಕಾರದ ಅನುದಾನದೊಂದಿಗೆ ದಿಗಂಬರ ಜೈನ ಮಠ ಈ ಬಾರಿಯ ಉತ್ಸವವನ್ನು ಮತ್ತಷ್ಟು ಕಳೆಗಟ್ಟುವಂತೆ ಮಾಡಲು ಶ್ರದ್ಧೆ ವಹಿಸಿದೆ. ಈ ಬಾರಿ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಭಕ್ತಾದಿಗಳನ್ನು, ಪ್ರವಾಸಿಗರನ್ನು ಸೆಳೆಯಲು ರೂಪಿಸಿರುವ ಯೋಜನೆಗಳು ಉತ್ಸವಕ್ಕೆ ಹೊಸತನವನ್ನು ದೊರಕಿಸಿಕೊಟ್ಟಿವೆ. ಮಹೋತ್ಸವದ ಮೂಲಸೌಲಭ್ಯಕ್ಕಾಗಿ ಸರ್ಕಾರ ರೂ.175 ಕೋಟಿ, ಶ್ರವಣಬೆಳಗೊಳಕ್ಕೆ ಸಂಪರ್ಕ ಕಲ್ಪಿಸುವ ಎಲ್ಲಾ ಮುಖ್ಯ ರಸ್ತೆಗಳ ದುರಸ್ತಿ, ಅಭಿವೃದ್ಧಿಗೆ ರೂ.89 ಕೋಟಿ ಒದಗಿಸಲಾಗಿದ್ದು, ಜೈನಮಠ, ಜಿಲ್ಲಾಡಳಿತ ಮಹೋತ್ಸವವನ್ನು ವೈಶಿಷ್ಟ್ಯಪೂರ್ಣ ವಿದ್ಯಮಾನವನ್ನಾಗಿಸಲು ಟೊಂಕ ಕಟ್ಟಿ ನಿಂತಿದೆ.

**ವಿಶೇಷತೆಗಳು**

ಮಸ್ತಕಾಭಿಷೇಕಕ್ಕೆ ವಿಶೇಷ ರೈಲು : ಯಶವಂತಪುರ–ಶ್ರವಣಬೆಳಗೊಳಕ್ಕೆ ನೇರ ರೈಲು ಸಂಪರ್ಕ ಕಲ್ಪಿಸಲಾಗಿದೆ. ಎರಡು ಮಾರ್ಗಗಳ ನಡುವಿನ ಪ್ರಯಾಣದ ಅವಧಿ 2 ಗಂಟೆ 45 ನಿಮಿಷ. ಇದರಿಂದ ಹೆಚ್ಚಿನ ಜನ ಭೇಟಿ ನೀಡುವ ನಿರೀಕ್ಷೆ ಇದೆ. ಭಕ್ತರ ಅನುಕೂಲಕ್ಕಾಗಿ ಈ ಬಾರಿ 22 ವಿಶೇಷ ರೈಲುಗಳನ್ನು ವ್ಯವಸ್ಥೆ ಮಾಡಲಾಗಿದೆ.

**ಅಟ್ಟಣಿಗೆಗೆ ಹೈಟೆಕ್ ಸ್ಪರ್ಶ:** ಮಹೋತ್ಸವದ ಇತಿಹಾಸದಲ್ಲೇ ಪ್ರಥಮ ಬಾರಿಗೆ ಬಾಹುಬಲಿ ಮಹಾಮಜ್ಜನಕ್ಕೆ ಜರ್ಮನ್‌ನ ರಿಂಗ್ ಅಂಡ್ ಲಾಕ್ ತಂತ್ರಜ್ಞಾನ ಬಳಸಿ ಮೂರ್ತಿ ಸುತ್ತಲೂ ಅಟ್ಟಣಿಗೆ ನಿರ್ಮಿಸಲಾಗಿದೆ. ಕ್ರಿ.ಶ. 980ರಿಂದ ಈವರೆಗೆ ಸುಮಾರು 87 ಮಸ್ತಕಾಭಿಷೇಕ ಕಂಡಿರುವ ವಿಂಧ್ಯಗಿರಿ ಮೇಲೆ ವಿರಾಜಮಾನನಾಗಿರುವ ಬಾಹುಬಲಿ ಮೂರ್ತಿಗೆ, ಸಹಸ್ರಮಾನದ 2ನೇ ಹಾಗೂ 88ನೇ ಮಹಾಮಜ್ಜನ ವಿಶೇಷ ಎನಿಸಲಿದೆ. ಲೆಹರ್ ಕಂಪೆನಿಯು ರೂ.11.25 ಕೋಟಿ ವೆಚ್ಚದ ಕಾಮಗಾರಿಗೆ ಒಟ್ಟು 450 ಟನ್ ಸಾಮಗ್ರಿ ಬಳಸಿರುವುದು ವಿಶೇಷ. ಕಬ್ಬಿಣ ಬಳಸಿದ್ದರೂ ವಿದ್ಯುತ್ ಅವಘಡಗಳಿಗೆ ಅವಕಾಶವಿಲ್ಲದಂತೆ ತಂತ್ರಜ್ಞಾನ ಅಳವಡಿಸಲಾಗಿದೆ.




## ಗುಳ್ಳಕಾಯಜ್ಜಿಯ ಅಭಿಷೇಕ ನೆನಪಿಸುವ ಲಾಂಛನ

ಬಾಹುಬಲಿ ಮಹಾಮಸ್ತಕಾಭಿಷೇಕ ಮಹೋತ್ಸವ ಲಾಂಛನಕ್ಕೆ ಐತಿಹಾಸಿಕ ಮಹತ್ವವಿದೆ. 10ನೇ ಶತಮಾನದಲ್ಲಿ ಗಂಗರ ದಂಡನಾಯಕ ಚಾವುಂಡರಾಯರು ಬಾಹುಬಲಿ ಮೂರ್ತಿಗೆ ಮಹಾಮಸ್ತಕಾಭಿಷೇಕ ಮಾಡುವ ಸಂದರ್ಭದಲ್ಲಿ ಅಭಿಷೇಕ ಅಪೂರ್ಣವಾಯಿತು. ಈ ಸಮಯದಲ್ಲಿ ಕ್ಷೇತ್ರದ ಅಧಿದೇವತೆಯಾದ ಕುಷ್ಮಾಂಡಿನಿಯು ಗುಳ್ಳಕಾಯಜ್ಜಿಯ ರೂಪದಲ್ಲಿ ಬಂದು ಭಕ್ತಿಯಿಂದ ಅಭಿಷೇಕ ಮಾಡುತ್ತಾರೆ. ಆಗ ಕ್ಷೀರವು ಅಕ್ಷಯವಾಗಿ ಹೊಳೆಯಂತೆ ಹರಿಯಿತು ಎಂಬುದು ಇಲ್ಲಿನ ಐತಿಹ್ಯ.

ಈ ಐತಿಹ್ಯದ ಹಿನ್ನಲೆಯಲ್ಲಿ ರೂಪಿಸಲಾಗಿರುವ ಲಾಂಛನದಲ್ಲಿ ಗುಳ್ಳ ಕಾಯಜ್ಜಿಯು ಬಾಹುಬಲಿ ಮೂರ್ತಿಗೆ ಅಭಿಷೇಕ ಮಾಡುವ 10ನೇ ಶತಮಾನದ ಸಂದರ್ಭವನ್ನು ಚಿತ್ರಿಸಲಾಗಿದೆ. ಲಾಂಛನವು ಕ್ರಮವಾಗಿ ವಿಶ್ವ, ಭಾರತ, ಕರ್ನಾಟಕ, ಮತ್ತು ಹಾಸನ ಜಿಲ್ಲೆಯ ನಕ್ಷೆಗಳನ್ನು ಒಳಗೊಂಡಿದೆ. ಲಾಂಛನದ ಎರಡು ಬದಿಯಲ್ಲಿ ಆನೆ ಚಿತ್ರವಿದೆ. 'ಅಹಿಂಸೆಯಿಂದ ಸುಖ ತ್ಯಾಗದಿಂದ ಶಾಂತಿ? ಎಂಬ ಸಂದೇಶವಿದೆ. ಹಾಸನದ ಕಲಾವಿದ ಶಂಕರಪ್ಪ ಇದನ್ನು ರಚಿಸಿದ್ದಾರೆ.